ಮಾಡಿದ್ದೀರಿ. ಸರ್ಕಾರದಿಂದ ಯಾವುದಕ್ಕೆ ಉತ್ತರ ಕೊಡುವುದಕ್ಕೆ ಸಾಧ್ಯವೋ ಅದನ್ನೆಲ್ಲಾ ಕೊಟ್ಟಿದ್ದೇವೆ. ನಿರಾಳವಾಗಿ ಉತ್ತರ ಕೊಟ್ಟು ಸದನ ನಡೆಸಿದಂಥ ಇತಿಹಾಸವೇ ಇಲ್ಲ. ಆದರೂ, ಅವರಿಗೆ ಸಮಾಧಾನವಾಗಿಲ್ಲ. ಎಷ್ಟು ಸಾಧ್ಯವೋ ಅಷ್ಟು ಉತ್ತರಗಳನ್ನು ತರಿಸಿ ಕೊಡುವುದಕ್ಕೆ ನಾನು ಪ್ರಯತ್ನಿಸುತ್ತೇನೆ. ನಾವು ನಿಯಮಗಳ ವ್ಯಾಪ್ತಿಯಲ್ಲಿ ಕೆಲಸ ಮಾಡೋಣ.

ಶ್ರೀ ಎ.ರಾಮದಾಸ್: ನಾನು ಅಧ್ಯಕ್ಷ ಸ್ಥಾನಕ್ಕೆ ಅಗೌರವ ತರುತ್ತಿಲ್ಲ. ಅವರೇ ಹೇಳಿದ್ದಾರೆ. ಸರ್ಕಾರ ಉತ್ತರಿಸಲಿ.

ವಿಷಯ: ಆ) ಗೋಕಾಕ್ ಮಿಲ್ಸ್ ನೌಕರರ ರಕ್ಷಣೆ ಕುರಿತು.

+ ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು): ಗೋಕಾಕ್ ಕರದಂಟಿಗೆ ಪ್ರಸಿದ್ಧವಾಗಿದ್ದು, ಗೋಕಾಕ್ ಫಾಲ್ಸ್ ನೋಡಲು ವಿದೇಶಿಯರೂ ಸಹ ಬರುತ್ತಾರೆ. ಇವತ್ತು ಗೋಕಾಕ್ ಹೆಸರು ಕೇಳಿದರೆ, ಅದಕ್ಕೆ ಗೂಂಡಾಗಿರಿ, ದೌರ್ಜನ್ಯದ ತಾಲ್ಲೂಕು ಎನ್ನುವ ಹೆಸರಿದೆ. ಗೋಕಾಕ್ ಎಂದರೆ ಅದೊಂದು ಮಿನಿ ಬಿಹಾರ ಇದ್ದಹಾಗೆ ನಮ್ಮ ರಾಜ್ಯದಲ್ಲಿ ಗೋಕಾಕ್ ಮಿಲ್ಸ್ ನೂರು ವರ್ಷಗಳಷ್ಟು ಹಳೆಯದು. ಅಲ್ಲಿ ಸಾವಿರಾರು ಕಾರ್ಮಿಕರು ಕೆಲಸ ಮಾಡುತ್ತಾರೆ. ಇಂದು ಆ ಕಾರ್ಮಿಕರ ಮೇಲೆ ದಿನನಿತ್ಯ ದೌರ್ಜನ್ಯ ನಡೆಯುತ್ತಿದೆ. ಅವರ ಮೇಲೆ ಬೇರೆ ಬೇರೆ ರೀತಿಯ ಹಿಂಸಾಕೃತ್ಯಗಳು ನಡೆಯುತ್ತಿವೆ. ಅವರು ಶಾಂತ ರೀತಿಯಿಂದ ಕೆಲಸ ಮಾಡಲಾರದ ಪರಿಸ್ಥಿತಿ ಬಂದಿದೆ. ಈ ಕಡೆ ಯೂನಿಯನ್‌ನವರು, ಆ ಕಡೆ ಆಡಳಿತ ವರ್ಗದವರು ಈ ಕಾರ್ಮಿಕರ ಮೇಲೆ ದೌರ್ಜನ್ಯ ನಡೆಸುತ್ತಿದ್ದಾರೆ. ನಾನು ಅಲ್ಲಿಗೆ ಎರಡು ಭಾರಿ ಭೇಟಿ ನೀಡಿದ್ದೆ. ಅಲ್ಲಿಯ ಪೋಲೀಸರು, ನೀವು ಒಳಗೆ ಹೋಗಬೇಡಿ, ಅದು ರಿಸ್ಟ್ರಿಕ್ಟೆಡ್ ಏರಿಯಾ ಎಂದು ಡಿಕ್ಲೇರ್ ಆಗಿದೆ, ಮಿಲ್‌ನವರ ಪರವಾನಗಿಯಿಲ್ಲದೆ, ಕ್ಯಾಬಿನೆಟ್ ಮಿನಿಸ್ಟರ್ ಆದರೂ, ಅಪೋಸಿಷನ್ ಲೀಡರ್ ಆದರೂ ಹೋಗುವ ಹಾಗಿಲ್ಲ, ಯಾರೂ ಹೋಗುವ ಆಗಿಲ್ಲವೆಂದರು. ನಾನು ಕಾರ್ಮಿಕರಿಗೆ ತೊಂದರೆಯಾಗಿದೆ ಹೋಗುತ್ತೇನೆ ಎಂದು ಹೇಳಿ, ಹೋಗಿದ್ದೆ. ಪೋಲೀಸ್ ಅಧಿಕಾರಿಗಳಿಗೆ, ಗೋಕಾಕ್ ಮಿಲ್ಸ್ ಆಡಳಿತ ವರ್ಗಕ್ಕೆ ಮತ್ತು ಅಲ್ಲಿನ ಯೂನಿಯನ್‌ಗೆ ಹೆದರುವ ಪರಿಸ್ಥಿತಿ ನಿರ್ಮಾಣವಾಗಿದೆ. ಈ ರೀತಿಯಾದರೆ ನನಗನ್ನಿಸುವ ಹಾಗೆ, ಅಲ್ಲಿ ಬಿಹಾರವನ್ನೂ ಮೀರಿಸುವ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಇಂದು ಗೋಕಾಕ್ ಮಿಲ್ಸ್‌ನಲ್ಲಾಗಬಹುದು, ನಾಳೆ ಬೇರೆ ಬೇರೆ ಭಾಗದಲ್ಲಿ ಆ ರೀತಿ ಆಗಬಹುದು. ಈಗಾಗಲೇ 400-500 ಕಾರ್ಮಿಕರನ್ನು ಯಾವುದೇ ಕಾರಣವಿಲ್ಲದೆ ಸರ್ವಿಸ್‌ನಿಂದ ಟರ್ಮಿನೇಟ್ ಮಾಡಿದ್ದಾರೆ. ಅವರನ್ನು ಕೇಳಲಿಲ್ಲ,

ಹೇಳಲಿಲ್ಲ, ಅವರ ಹಕ್ಕುಗಳನ್ನು ಪ್ರತಿಪಾದಿಸಲು, ಹೋರಾಟ ಮಾಡಲು ಬೆಂಬಲ ಸಿಗುತ್ತಿಲ್ಲ. ಅಲ್ಲಿ ಈ ರೀತಿ ದೌರ್ಜನ್ಯ ನಡೆಯುತ್ತಿದೆ. ಅದಕ್ಕೆ ಕರ್ಟೈಲ್ ಮಾಡಬೇಕು. ಇಲ್ಲದಿದ್ದರೆ, ಸರ್ಕಾರಕ್ಕೆ ಕೆಟ್ಟ ಹೆಸರು ತರುವುದಾಗುತ್ತದೆ. ಯಾವ ರಾಜಕಾರಣಿ ಇರಲಿ, ದೊಡ್ಡ ಶಕ್ತಿಗಳೇ ಇರಲಿ, ಸರ್ಕಾರ ಸರಿಯಾದ, ಕಟ್ಟುನಿಟ್ಟಿನ ಕ್ರಮ ಕೈಗೊಂಡರೆ, ಆ ಗೋಕಾಕ್ ಮಿಲ್ಸ್ ನೌಕರರ ಬಗ್ಗೆ ಒಳ್ಳೆಯ ರೀತಿಯಲ್ಲಿ ರಕ್ಷಣೆ ಸಿಗಲು ಸಾಧ್ಯವಿದೆ. ಈ ಮಹತ್ವದ ವಿಷಯವನ್ನು ನಾನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿ, ಸರ್ಕಾರದ ಮತ್ತು ಗೃಹ ಸಚಿವರು ಹಾಗೂ ಕಾರ್ಮಿಕರ ಗಮನಕ್ಕೆ ತರುತ್ತಿದ್ದೇನೆ. ಅಲ್ಲಿನ ಕಾರ್ಮಿಕರು ಮಾನ್ಯ ಕಾರ್ಮಿಕ ಸಚಿವರಿಗೆ ಅನೇಕ ಮನವಿಗಳನ್ನು ಸಲ್ಲಿಸಿದ್ದಾರೆ. ಇಲ್ಲಿಯವರೆಗೆ ಒಬ್ಬರೂ ಅಲ್ಲಿಗೆ ವಿಸಿಟ್ ಮಾಡಲಿಲ್ಲ. ಕಾರ್ಮಿಕರ ಅಳಲನ್ನು ಕೇಳಲಿಲ್ಲ. 10-15 ಕಾರ್ಮಿಕರ ಗುಡಿಸಲುಗಳಿಗೆ ಬೆಂಕಿ ಹಚ್ಚಿದ್ದಾರೆ, ಮನೆಗಳನ್ನು ಲೂಟಿ ಮಾಡಿದ್ದಾರೆ, ಸತ್ಯಾಗ್ರಹ, ಹೋರಾಟ ಮಾಡುತ್ತಿದ್ದವರ ಮೇಲೆ ಪ್ರತಿನಿತ್ಯ ದೌರ್ಜನ್ಯ ನಡೆಯುತ್ತಿದೆ. ಈ ರೀತಿ ನಡೆದರೆ, ಕಾರ್ಮಿಕರ ಹಕ್ಕುಗಳಿಗೆ ಧಕ್ಕೆಯಾಗುವ ರೀತಿಯಲ್ಲಿ ನಡೆದರೆ, ಪ್ರಜಾಪ್ರಭುತ್ವದಲ್ಲಿದ್ದೇವೆಯೋ ಅಥವಾ ಯಾವುದೋ ಒಂದು ಗೂಂಡಾಗಿರಿ ರಾಜ್ಯದಲ್ಲಿದ್ದೇವೆಯೋ ಎಂಬ ಕಲ್ಪನೆ ಬರುತ್ತದೆ. ಈ ಗೂಂಡಾಗಿರಿಯನ್ನು ತಡೆಯಲು, ದಬ್ಬಾಳಿಕೆಯನ್ನು ತಡೆಯಲು ಸರ್ಕಾರ ಸರಿಯಾದ ಕ್ರಮ ಕೈಗೊಂಡು, ತಪ್ಪಿತಸ್ಥರ ಮೇಲೆ ಉಗ್ರ ಕ್ರಮ ಕೈಗೊಳ್ಳಬೇಕು. ಅಲ್ಲಿಯ ಕಾರ್ಮಿಕರಿಗೆ ರಕ್ಷಣೆ ಸಿಗಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಗೃಹ ಸಚಿವರಲ್ಲಿ ಮತ್ತು ಕಾರ್ಮಿಕರ ಸಚಿವರಲ್ಲಿ ವಿನಂತಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ(ಗೃಹ ಸಚಿವರು): ಗೋಕಾಕ್‌ಗೆ ಸಂಬಂಧಪಟ್ಟ ಶಾಸಕರು ಈ ಸದನದಲ್ಲಿದ್ದಾರೆ. ಅಲ್ಲೇನು ಪರಿಸ್ಥಿತಿ ಇದೆ ಎನ್ನುವುದು ಅವರಿಗೆ ಗೊತ್ತಿದೆ. ನಮಗೆ ಸಂಬಂಧಪಟ್ಟಿದ್ದೇನಾದರೂ ಇದ್ದರೆ, ನೇರವಾಗಿ ಮಾನ್ಯ ವಿರೋಧ ಪಕ್ಷದ ನಾಯಕರು ಅಲ್ಲಿನ ಪರಿಸ್ಥಿತಿಯನ್ನು ಪ್ರಸ್ತಾಪಿಸಿದ್ದಾರೆ, ಯಾವ ವಿಷಯದಲ್ಲಿ ನಮ್ಮ ವತಿಯಿಂದ ಅಲ್ಲಿ ಪ್ರೊಟೆಕ್ಷನ್ ಸಿಗಬೇಕು, ಮ್ಯಾನೇಜ್‌ಮೆಂಟ್ ಆಗಲಿ, ಲೇಬರ್‌ಗಾಗಲಿ ಎಂಬ ಬಗ್ಗೆ ನನಗೆ ಮನವಿ ಕೊಟ್ಟರೆ, ನಾನು ತಕ್ಷಣ ಸಂಬಂಧಪಟ್ಟ ಐಜಿಪಿ ಮತ್ತು ಎಸ್‌ಪಿಯವರೊಡನೆ ಮಾತನಾಡುತ್ತೇನೆ. ತಮಗೆ ಗೊತ್ತಿರುವ ಹಾಗೆ, ಇದೇನೂ ಹೊಸ ವಿಷಯವಲ್ಲ. ಅಲ್ಲಿ ಕಾರ್ಮಿಕರಲ್ಲೇ ಎರಡು ಗುಂಪುಗಳು ಇದ್ದು, 2-3 ಮುಖಂಡರಿದ್ದಾರೆ. ಅದಕ್ಕೆ ಸದನದಲ್ಲಿ ಆ ಮತಕ್ಷೇತ್ರಕ್ಕೆ ಸಂಬಂಧಪಟ್ಟ ಶಾಸಕರಿದ್ದಾರೆ. ಅವರ ಅಭಿಪ್ರಾಯವನ್ನೂ ನಾವು ತೆಗೆದುಕೊಂಡು ಕಾರ್ಮಿಕರ ಬಗ್ಗೆ ಒಳ್ಳೆಯ ಕ್ರಮ ತೆಗೆದುಕೊಳ್ಳುವುದಕ್ಕೆ ಕಾರ್ಮಿಕ ಸಚಿವರು ನಮಗೇನು ಹೇಳುತ್ತಾರೆಯೋ ನೋಡಿ, ಈ ರೀತಿಯಾಗಿ ನಮಗೆ ರಕ್ಷಣೆ ಕೊಡಿ ಎಂದರೆ ಖಂಡಿತವಾಗಿಯೂ ಅಂಥವರಿಗೆ ರಕ್ಷಣೆಯನ್ನು ಒದಗಿಸಿಕೊಡುತ್ತೇವೆ.